ಪಿರಿಯಾಪಟ್ಟಣ ತಾಲ್ಲೂಕಿನ ರಸ್ತೆ ಅಭಿವೃದ್ಧಿ

57 (485) ಶ್ರೀ ವೆಂಕಟೇಶ್ ಕೆ. (ಪಿರಿಯಾಪಟ್ಟಣ):– ಮಾನ್ಯ ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ. ರಾಜ್ಯ ಹೆದ್ದಾರಿ ಹಾಗೂ ಎಷ್ಟು ಕಿ.ಮೀ. ಜಿಲ್ಲಾ ಮುಖ್ಯ ರಸ್ತೆ ಇದೆ (ರಸ್ತೆಯ ಹೆಸರು ಹಾಗೂ ಅದರ ಉದ್ದ ತಿಳಿಸುವುದು) ಈ ರಸ್ತೆಗಳಲ್ಲಿ ಯಾವ ರಸ್ತೆಗಳು ಭಾಗಶಃ ಹಾಳಾಗಿವೆ; ಯಾವ ರಸ್ತೆಗಳಲ್ಲಿ ಮಧ್ಯದಲ್ಲಿ ಹೆಚ್ಚು ಹೆಚ್ಚು ಗುಂಡಿಗಳು ಇವೆ; ಯಾವ ರಸ್ತೆಗಳು ಶೇಕಡ 50 ಕ್ಕಿಂತಲೂ ಹೆಚ್ಚು ಹಾಳಾಗಿವೆ ತಿಳಿಸುವುದು.

ಆ) ಈ ರಸ್ತೆಗಳ ಅಭಿವೃದ್ಧಿಗಾಗಿ 2007–08, 2008–09 ಮತ್ತು 2009–10ನೇ ಸಾಲಿನಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಈ ಅನುದಾನದಡಿ ಕಳೆದ ಮೂರು ವರ್ಷಗಳಿಂದ ಎಷ್ಟು ಕಿ.ಮೀ. ರಸ್ತೆ ಅಭಿವೃದ್ಧಿಪಡಿಸಲಾಗಿದೆ ವಿವರಿಸುವುದು.

ಇ) ಈ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ವಿವರಿಸುವುದು?

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು):–

ಅ) ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ವಿವರ ಈ ಕೆಳಗಿನಂತಿದೆ.

ವರ್ಗ	ಸಂಖ್ಯೆ	ಉದ್ದ
ರಾಜ್ಯ ಹೆದ್ದಾರಿ	3	72.44 ಕಿಮೀ
ಜಿಲ್ಲಾ ಮುಖ್ಯ ರಸ್ತೆ	27	344.87 ಕಿಮೀ

ರಸ್ತೆವಾರು ವಿವರಗಳು ಮತ್ತು ಸದರೀ ರಸ್ತೆಗಳಲ್ಲಿ ಭಾಗಶಃ ಗುಂಡಿ, ಹೆಚ್ಚಿನ ಗುಂಡಿಗಳು ಮತ್ತು ಶೇ. 50 ಕ್ಕಿಂತ ಹೆಚ್ಚಿಗೆ ಹಾಳಾದ ವಿವರಗಳನ್ನು ಅನುಬಂಧ–ಎ ದಲ್ಲಿ ನೀಡಲಾಗಿದೆ. (ಲಗತ್ತಿಸಿದೆ)

ಆ) ವಿವರಗಳು ಈ ಕೆಳಕಂಡಂತಿವೆ:

ವರ್ಷ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ಅಭಿವೃದ್ಧಿಪಡಿಸಲಾದ ಉದ್ದ (ಕಿ.ಮೀ.ನಲ್ಲಿ)	
2007–08	12ನೇ ಹಣಕಾಸು	140.00	12.75
	ಡಾ॥ ನಂಜುಂಡಪ್ಪ ವರದಿ	71.73	6.60
	ವಿಶೇಷ ಘಟಕ ಯೋಜನೆ	76.00	3.39
	3054–ಮುಮಂಗ್ರಾ ರಸ್ತೆ ನಿಧಿ	180.00	16.00
2008–09	5054–ಸಿಆರ್‌ಎಫ್	100.00	3.10
	3054–ಮುಮಂಗ್ರಾ ರಸ್ತೆ ನಿಧಿ	229.00	14.20
	ವಿಶೇಷ ಘಟಕ ಯೋಜನೆ	5.00	0.30
2009–10	ನಬಾರ್ಡ್–14	75.00	3.00
	5054–ಸಿಆರ್‌ಎಫ್	200.00	5.40
	ಸುವರ್ಣ ರಸ್ತೆ ವಿಕಾಸ ಯೋಜನೆ	104.16	3.00
	ಡಾ॥ ನಂಜುಂಡಪ್ಪ ವರದಿ	37.49	3.90
	ಒಟ್ಟು	**1218.08**	**71.64**

ಇ) 1) ಕಳೆದ ಮೂರು ವರ್ಷಗಳಲ್ಲಿ ಒಟ್ಟು ರೂ. 1218.08 ಲಕ್ಷಗಳ ಅನುದಾನದಲ್ಲಿ ಜಿಲ್ಲಾ ಮುಖ್ಯ ರಸ್ತೆಯಲ್ಲಿ ಒಟ್ಟು 71.64 ಕಿ.ಮೀಗಳ ಡಾಂಬರೀಕರಣ ಮಾಡಿ ರಸ್ತೆ ಅಭಿವೃದ್ಧಿ ಪಡಿಸಲಾಗಿದೆ.

2) ಹಳೇಬೀಡು–ಆನೆಚೌಕೂರು (ರಾ.ಹೆ.21) ರಸ್ತೆಯ ಅಭಿವೃದ್ಧಿಗೆ ರಾಜ್ಯ ಹೆದ್ದಾರಿ ನವೀಕರಣ ಯೋಜನೆಯಡಿಯಲ್ಲಿ ರೂ. 164.07 ಲಕ್ಷಗಳ ಅನುದಾನವಿದ್ದು 4.50 ಕಿ.ಮೀಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ.

3) ಹಾಳಾದ ರಸ್ತೆಗಳಲ್ಲಿ ವಾರ್ಷಿಕ ನಿರ್ವಹಣೆಯಲ್ಲಿ ಲಭ್ಯವಿರುವ ಅನುದಾನದಡಿಯಲ್ಲಿ ಕಾಲಕಾಲಕ್ಕೆ ರಸ್ತೆ ನಿರ್ವಹಣೆಯನ್ನು ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತದೆ.

ಅನುಬಂಧ - ಎ

ಲ೬೨ - ೪೫೯/೨೦೧೧-೧೨

ಲೋಕೋಪಯೋಗಿ ಇಲಾಖೆ ಉಪವಿಭಾಗ ಪಿರಿಯಾಪಟ್ಟಣದ ವ್ಯಾಪ್ತಿಯಲ್ಲಿ ಬರುವ ರಸ್ತೆಯ ಮಾಹಿತಿಗಳು

ಕ್ರ.ಸಂ	ರಸ್ತೆಯ ಹೆಸರು (ರಾಜ್ಯ ಹೆದ್ದಾರಿ/ ಜಿಲ್ಲಾ ಮುಖ್ಯ ರಸ್ತೆ)	ಒಟ್ಟು ಉದ್ದ	ಯೋಗ್ಯವಾಗಿರುವುದು			ಭಾಗಶಃ			ಹಾಳು ಗುಂಡಿ			50 % ಹಾಳಾಗಿರುವುದು			ಷರಾ
			ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	
ರಾಜ್ಯ ಹೆದ್ದಾರಿ															
1	ಹಳೇಬೀಡು-ಅನೆಚೌಕೂರು ರಸ್ತೆ (ಸಂ:21) (ಹಳೇಬೀಡು-ಬಾಣಾವರ-ಬಡಕಲಗೂಡು-ಪಿರಿಯಾಪಟ್ಟಣ ಮೂಲಕ)	33.60	100.90	101.61	0.71	–	–	–	–	–	–	89.57	100.90	11.33	
			105.50	106.00	0.50	–	–	–	–	–	–	101.60	105.50	3.90	
												106.00	123.17	17.17	
2	ಹುಣಸೂರು-ತಲಕಾವೇರಿ ರಸ್ತೆ (ಸ:90) (ವಿರಾಜಪೇಟೆ-ಸೋಮವಾರಪೇಟೆ- ಮಾರ್ಗಾಡು-ಭಾಗಮಂಡಲ ಸುಂಟಿಕೊಪ್ಪ)	9.80	–	–	–	–	–	–	–	–	–	0.00	9.80	9.80	
3	ಮೈಸೂರು-ಬಂಟ್ವಾಳ ರಸ್ತೆ (ಸ:88)	27.04	59.90	86.94	27.04	–	–	–	–	–	–	–	–	–	
	ಒಟ್ಟು	70.44			28.25									42.20	
ಜಿಲ್ಲಾ ಮುಖ್ಯ ರಸ್ತೆ															
1	ಗಾಮನಾಥಪುರ-ತೆರಕಣಾಂಬಿ ರಸ್ತೆಯಿಂದ ಎ.ಡಿ. ರಸ್ತೆ ಮಾರ್ಗ ಚಲ್ಲಹನಸೋಗೆ-ಹಲಗನಹಳ್ಳಿ-ಕಾಡಗಾಲ್-ಕೊಪ್ಪ ರಸ್ತೆ	31.70	–	–	..	7.00	21.00	14.00	21.00	28.00	7.00	28.00	38.70	10.70	–
2	ಹಳೇಬೀಡು-ಅನೆಚೌಕೂರು ರಸ್ತೆಯಿಂದ ಬ್ಯಾಡರ ರಸ್ತೆ ಮಾರ್ಗ ಭುವನಹಳ್ಳಿ-ಅಲಗನಕುಪ್ಪೆ-ಪಿರಿಯಾಪಟ್ಟಣ (ಜಿ-ಮಿಷ್ಟೂರು	25.35	–	–	–	17.00	25.35	8.35	0.00	17.00	17.00	–	–	–	–
3	ತಿಪ್ಪೂರುನಿಂದ-ಹುಣಸೂರು-ತಲಕಾವೇರಿ ರಸ್ತೆ ಮಾರ್ಗ ರಾವಂದೂರು-ಕಂಪ್ಲಾಪುರ-ಬೆಳ್ಳಾ	25.60	–	–	–	0.00	8.00	8.00	8.00	11.00	3.00	–	–	–	–
						11.00	25.60	14.60							
4	ಕೆ ಆರ್.ನಗರ-ಕಟ್ಟೆಮಳಲವಾಡಿ-ಚನ್ನಂಗೆರೆ ರಸ್ತೆ ಮಾರ್ಗ ಮಾಕೋಡು ರಾವಂದೂರು-ಅತ್ತಿಗೋಡು-ಸಂಗಾಪುರಪಟ್ಟಣ ರಸ್ತೆ	19.70	25.00	29.20	4.20	10.00	25.00	13.50	–	–	–	8.00	10.00	2.00	–
5	ಎಂ.ಡಿ ರಸ್ತೆಯಿಂದ ಎಂ.ಜಿ.ಪಾಳ್ಯ ನಾಗರ ಮೆಳ್ಳಹಳ್ಳಿ ಕಗ್ಗುಂಡಿ-ಹೆಮ್ಮಿಗೆ	8.58	–	–	–	0.00	8.70	8.58	–	–	–	–	–	–	
6	ಗೊರವಳ್ಳಿ-ಚಪ್ಪರದಹಳ್ಳಿ-ಅಂಬಾಸಿಲೆ-ದೊಡ್ಡಕಾಮನಹಳ್ಳಿ ರಸ್ತೆ	13.70	0.00	5.20	5.20	5.80	8.00	2.20	5.20	5.80	0.60				
						8.30	13.70	5.40	8.00	8.30	0.30	–	–	–	

ಕ್ರ.ಸಂ	ರಸ್ತೆಯ ಹೆಸರು (ರಾಜ್ಯ ಹೆದ್ದಾರಿ/ ಜಿಲ್ಲಾ ಮುಖ್ಯ ರಸ್ತೆ)	ಒಟ್ಟು ಉದ್ದ	ದೋಗ್ಯವಾಗಿದುವುದು			ಭಾಗಶಃ			ಹೊಸ ಗುಂಡಿ			50 % ಹಾಳಾಗಿರುವುದು			ಪರಾ
			ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	
7	ಪಾಡ್ಯ-ಬೆಟ್ಟದಪುರ-ಪ್ಲೇಜರ್ ಪೇಟೆ ರಸ್ತೆ	32.10	0.00	8.40	8.40	8.40	32.10	23.70	-	-	-	-	-	-	
8	ಎಂ.ಬಿ. ರಸ್ತೆಯಿಂದ ಕೆ.ಎಂ.ಆರ್.ಎ.ರಸ್ತೆ ಮಾರ್ಗ ಬಸಲಾಪುರ ವಿ.ಜ. ಕೊಪ್ಪಲು-ವಿನ್.ಶೆಟ್ಟಹಳ್ಳಿ-ಕಳಗನಹಳ್ಳಿ ರಸ್ತೆ	15.10	7.40	8.60	1.20	0.00	7.40	7.40	-	-	-	-	-	-	-
			9.30	9.50	0.20	8.60	9.30	0.70							
			10.20	10.40	0.20	9.50	10.20	0.70							
			13.00	14.00	1.00	10.40	13.00	2.60							
						14.00	15.10	1.10							
9	ಹುಣಸೂರು-ಕಿರಿಯಾಪಟ್ಟಣ ರಸ್ತೆ (ನಿಲುವಾಗಿಲು-ಬಂಬುವಳ್ಳಿ ಮಾರ್ಗ)	7.10	32.50	35.50	3.00	35.50	39.60	4.10	-	-	-	-	-	-	
10	ಎಂ.ಬಿ. ರಸ್ತೆಯಿಂದ ಮಾಕನಹಳ್ಳಿ ಮಾರ್ಗ ಜವರೇಗೌಡ್ರ ಸೇರುವ ರಸ್ತೆ	5.50	-	-	-	0.00	5.50	5.50	-	-	-	-	-	-	
11	ಎಂ.ಬಿ.ರಸ್ತೆಯಿಂದ ಹುಣಸೂರು-ತಲಕಾವೇರಿ ರಸ್ತೆ ಮಾರ್ಗ ಹುಣಸೇಹಳ್ಳಿ ರಸ್ತೆ	7.70	-	-	-	0.00	7.70	7.30	-	-	-	-	-	-	
12	ಹೆಚ್.ಕೆ.ಕೆ ರಸ್ತೆಯಿಂದ ಮಲ್ಲಿಗನಹಳ್ಳಿ ರಸ್ತೆ ಮಾರ್ಗ ಕೆ. ಬಸವನಹಳ್ಳಿ	3.70	2.10	3.70	1.60	-	-	-	-	-	-	2.00	2.10	2.10	
13	ಹೆಚ್.ಕೆ.ಕೆ ರಸ್ತೆಯಿಂದ ಕೊಳ್ಳಯ್ಯನಕೊಪ್ಪಲು ರಸ್ತೆ	3.60	0.60	2.80	2.20	2.80	3.60	0.80	-	-	-	0.00	0.60	0.60	
14	ಮೈಸೂರು-ಲಂಬ್ಲಾಳ ರಸ್ತೆಯಿಂದ ಆರ್. ಹುಂಗ ರಸ್ತೆ ಮಾರ್ಗ ತಿರ್ಲಳ್ಳಿ -ಅಸಾಳು ರಸ್ತೆ	6.60	0.00	6.60	6.60	-	-	-	-	-	-	-	-	-	
15	ಎಂ.ಬಿ. ರಸ್ತೆಯಿಂದ ಪಿ.ಟಿ.ಬಿ.ರಸ್ತೆ ಮಾರ್ಗ ಕಂದೇಗಾಲ ರಸ್ತೆ	3.50	-	-	-	0.00	3.50	3.50	-	-	-	-	-	-	
16	ಮೂಗನತಹಳ್ಳಿ - ಚಿಕ್ಕನೇರಳೆ - ಹಾರ್ಳಳ್ಳಿ ರಸ್ತೆ	15.10	-	-	-	0.00	15.10	15.10	-	-	-	-	-	-	
17	ಹೆಳೆಬೀಡು-ಆನೆಚೌಕೂರು ರಸ್ತೆಯಿಂದ ಮೂಗನತಹಳ್ಳಿ-ಚಿಕ್ಕನೇರಳೆ ಸಂತೆಮಾಳ ರಸ್ತೆ ಮಾರ್ಗ ಕೂರಗಲ್ - ಮೋಗನಹಳ್ಳಿ -	6.90	-	-	-	0.00	2.20	2.20	2.20	2.50	0.30	5.30	6.90	1.60	
						2.50	4.20	1.70	4.20	5.30	1.10				
18	ಹಳೇಬೀಡು-ಆನೆಚೌಕೂರು ರಸ್ತೆಯಿಂದ ಕೆ.ಎಂ.ಆರ್.ಎ ರಸ್ತೆ ಮಾರ್ಗ ದೊಡ್ಡಬೇಲಾಳು ಮಾಕೋಡು ರಸ್ತೆ	15.54	-	-	-	0.00	15.54	15.54	-	-	-	-	-	-	

ಚಿಕ್ಕ - 485 / 2011-12

ಕ್ರ.ಸಂ	ರಸ್ತೆಯ ಹೆಸರು (ಶಾಸ್ತ್ರ ಹೆದ್ದಾರಿ: ಚಿಕ್ಕ ಮುಖ್ಯ ರಸ್ತೆ)	ಒಟ್ಟು ಉದ್ದ	ಯೋಗ್ಯದಾಗಿರುವುದು			ಭಾಗಶಃ			ಹೆಚ್ಚು ಗುಂಡಿ			50 % ಹಾಳಾಗಿರುವುದು			ಪದಾ
			ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	ಯಿಂದ	ವರೆಗೆ	ಉದ್ದ	
19	ಮಾಸೇನಹಳ್ಳಿ -ವಾಂಚಿಕೆರೆಕ್ರಾಸ್-ಹೊಸಹಳ್ಳಿ-ಘೋಷಣೆಹಳ್ಳ ರಸ್ತೆ	4.00	–	–	–	0.00	4.00	4.00	–	–	–	–	–	–	
20	ಪಿರಿಯಾಪಟ್ಟಣ – ಕುಂಜನಹಳ್ಳಿ ರಸ್ತೆ ಮಾರ್ಗ ಹುಟುಪಾಡಿ – ಬೇಗೂರು – ನಂದಿನಾಥಪುರ	20.50	–	–	–	0.00	20.50	20.50	–	–	–	–	–	–	
21	ಕೊಪ್ಪ – ಬೈಲಕುಪ್ಪೆ ರಸ್ತೆ ಮಾರ್ಗ ರಾಣಿಗೇಟ್ – ಲಾಮಕ್ಕಾಂಪ್	18.50	12.00	18.50	6.50	0.00	12.00	12.00	–	–	–	–	–	–	
22	ಹಾರನಹಳ್ಳಿ – ಹಾಮಾರಾಯನಕೋಟೆ ರಸ್ತೆ ಮಾರ್ಗ ಕಂಬೀಪುರ – ಹೂನ್ನಾಪುರ	9.50	0.00	3.00	3.00	3.70	4.70	1.00	3.00	3.70	0.70				
						4.80	6.00	1.20	6.00	7.20	1.20	9.60	7.20	2.40	
23	ಚೆಟ್ಟಿಪುರ - ತುಂಗ - ರಾವಂದೂರು ರಸ್ತೆ	14.00	–	–	–	0.00	2.20	2.20	2.20	2.30	0.10				
						2.30	2.80	0.50	2.80	3.60	0.80				
						3.60	7.90	4.30	7.90	8.00	0.10				
						8.00	9.60	1.60	9.60	10.10	0.50	13.20	14.00	0.80	
						10.10	10.50	0.70	10.80	11.10	0.30				
						11.10	11.60	0.50	11.60	11.80	0.20				
						11.80	13.20	1.40							
24	ಹನುವಿನಕಾವಲು ಬಿಂದಿ ಹೆಚ್.ಕೆ.ಕೆ. ರಸ್ತೆ ಮಾರ್ಗ ಚಪ್ಪರದಕಲ್ಲಿ - ಪಾಣಸೇಕೊಪ್ಪಲು ರಸ್ತೆ	7.30	0.00	2.80	2.80	3.40	3.80	0.40							
			3.10	3.40	0.30	6.00	7.00	1.00							
			3.80	6.00	2.20										
			7.00	7.60	0.60										
25	ಸಿಗೂರು ಬಿಂದ ಬಿ.ಟಿ.ಆರ್. ರಸ್ತೆ ಮಾರ್ಗ ಅಂತೆನಹಳ್ಳಿ - ನಂದೀಪುರ	8.00	–	–	–	0.00	8.00	8.00	–	–	–	–	–	–	
26	ನಂದಿನಾಥಪುರದಿಂದ ಲಾಮಕ್ಕಾಂಪ್ ಮಾರ್ಗ ನೂತನಹಳ್ಳಿ – ಅಲನಾಡ್ಡ	8.00	–	–	–	5.00	8.00	3.00	–	–	–	0.00	5.00	5.00	
27	ಕೆ.ಎಂ.ಸಿ.ಆರ್. ರಸ್ತೆಯಿಂದ ಹುಬಿ.ಟಿ.ಎಫ್ ರಸ್ತೆ ಮಾರ್ಗ ಸಾಗರಪೇಟೆ – ಪಂಡಿತವಳ್ಳಿ – ಗಳಗಾರ – ಗುಡಿಕೊಪ್ಪಲು	8.00	4.50	5.40	0.90	0.00	4.50	4.50	–	–	–	–	–	–	–
			6.20	6.90	0.70	5.40	6.20	0.80							
						6.90	8.00	1.10							
	ಒಟ್ಟು	324.87			50.80			235.67			53.20			25.20	

ಶ್ರೀ ಕೆ. ವೆಂಕಟೇಶ್:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ಅವರು ಇದರಲ್ಲಿ ಸುಳ್ಳು ಸುಳ್ಳು ಉತ್ತರ ಕೊಟ್ಟಿದ್ದಾರೆ. ವಾಸ್ತವ ವಿಚಾರಕ್ಕೂ ಇವರು ಕೊಟ್ಟಿರುವ ಮಾಹಿತಿಗೂ ಸಂಬಂಧವಿಲ್ಲ. ನಮ್ಮಲ್ಲಿ MDR 344 ಕಿ.ಮೀ. ಇದೆ, NH 73 ಕಿ.ಮೀ. ಇದೆ. NH ಗಳಲ್ಲಿ ವಾಹನಗಳಲ್ಲ, ಜನರೇ ನಡೆದಾಡುವುದಕ್ಕೆ ಆಗುತ್ತಿಲ್ಲ. ಅಂತಹ ಪರಿಸ್ಥಿತಿ ಇದೆ. 344 ಕಿ.ಮೀ. ಇರುವಂತಹ MDR ನಲ್ಲಿ ಕೂಡ ಅದೇ ಪರಿಸ್ಥಿತಿ ಇದೆ. ಇವರು ಮೂರು ವರ್ಷದಲ್ಲಿ 70 ಕಿ.ಮೀ. ರಸ್ತೆ ಅಭಿವೃದ್ಧಿ ಮಾಡಿದ್ದೇವೆಂದು ಹೇಳುತ್ತಾರೆ. ಆ ರಸ್ತೆ ಕ್ವಾಲಿಟಿ ಹೇಗಿದೆ ಎಂದರೆ ಮೂರು ವರ್ಷದಲ್ಲಿ ಆಗಲೇ ರಸ್ತೆಗಳು ಹಾಳಾಗಿ ಹೋಗಿವೆ. ಮಾನ್ಯ ಮಂತ್ರಿಗಳು ಬಹಳ ತಪ್ಪು ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ. ಇವರು ಮಾಹಿತಿ ಹೇಗೆ ಕೊಟ್ಟಿದ್ದಾರೆಂದು ನಾನು cross check ಮಾಡಿದ್ದೇನೆ. ತಮ್ಮನ್ನು save ಮಾಡುವುದಕ್ಕೆ ಅಧಿಕಾರಿಗಳು ಕೊಟ್ಟಿದ್ದಾರೆ, ಆದರೆ ವಾಸ್ತವಾಮಶ ಬೇರೆಯೇ ಇದೆ. ನಾನು ತಮ್ಮ ಹತ್ತಿರ ಬಂದು ನಮ್ಮ ರಸ್ತೆಯ ಪರಿಸ್ಥಿತಿ ಹೇಗಿದೆ ಎಂದು ಅನೇಕ ಸಲ ಮನವಿ ಮಾಡಿದ್ದೇನೆ. ಆನೆ ಹೊಟ್ಟೆಗೆ ಮೂರು ಕಾಸಿನ ಮಜ್ಜಿಗೆ ಎಂದು ಹೇಳುತ್ತಾರೆ. ಮೂರು ವರ್ಷದಲ್ಲಿ 70 ಕಿ.ಮೀ. ರಸ್ತೆ ಅಭಿವೃದ್ಧಿ ಮಾಡಿದ್ದೇನೆಂದು ಹೇಳಿದರೆ ಹೇಗೆ? ಅಲ್ಲಿ ಜನ ಓಡಾಡುವುದು ಬೇಡವೆ? ಇನ್ನೊಂದು ವಿಚಾರವೇನೆಂದರೆ, ನಾವೆಲ್ಲ ಆಂಧ್ರ ಮತ್ತು ತಮಿಳುನಾಡಿನಿಂದ ಗೆದ್ದು ಬಂದಿದ್ದೇವೆಂದು ಮಾನ್ಯ ಮಂತ್ರಿಗಳು ತಿಳಿದುಕೊಂಡಿದ್ದಾರೆ. ಇವರು ಕರ್ನಾಟಕ ರಾಜ್ಯದ ಎಂಎಲ್ಎ, ಇಲ್ಲಿ ವಾಹನ ಮತ್ತು ಜನ ಓಡಾಡುತ್ತಿದ್ದಾರೆನ್ನುವ ಪರಿಜ್ಞಾನವೇ ಅವರಿಗೆ ಇಲ್ಲ. ಈ ರೀತಿ ಪರಿಜ್ಞಾನವೇ ಮಾನ್ಯ ಮಂತ್ರಿಗಳಿಗೆ ಇಲ್ಲವೆಂದರೆ ನಾವು ಏನು ಮಾಡುವುದು? ನಾವು ಜನರಿಗೆ ಏನೆಂದು ಉತ್ತರ ಹೇಳುವುದು? ನಮಗೆ ಜನ ಏನು ಕೆಲಸ ಮಾಡುತ್ತೀರೆಂದು ದಿನ ಬೈಯ್ಯುತ್ತಾರೆ. ನಾವು ಮಾನ್ಯ ಮಂತ್ರಿಗಳ ಹತ್ತಿರ ಅನೇಕ ಸಲ ಹೋಗಿ ಈ ರೀತಿ ರಸ್ತೆಗಳು ಹದಗೆಟ್ಟಿವೆ, ನಮಗೆ ರಸ್ತೆ ಅಭಿವೃದ್ಧಿ ಮಾಡಿಕೊಡಿ ಎಂದು ಮನವಿ ಮಾಡಿದ್ದೇವೆ. ಅವರು ಅದನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ. ನಾವು ಏನು ಮಾಡಬೇಕೆಂದು ಹೇಳಿ, ಇಲ್ಲಿ ತಪ್ಪು ತಪ್ಪು ಮಾಹಿತಿ ಕೊಟ್ಟಿದ್ದಾರೆ.

ಶ್ರೀ ಸಿ.ಎಂ. ಉದಾಸಿ:– ಮಾನ್ಯ ಉಪಾಧ್ಯಕ್ಷರೆ, ತಪ್ಪು ಮಾಹಿತಿಯನ್ನು ಕೊಟ್ಟಿಲ್ಲ. 71 ಕಿ.ಮೀ. ರಸ್ತೆ ಅಭಿವೃದ್ಧಿ ಕೆಲಸಕ್ಕೆ 12 ಕೋಟಿ ರೂಪಾಯಿ ಖರ್ಚು ಮಾಡಿರುವುದನ್ನು ಹೇಳಿದ್ದೇನೆ.

ಶ್ರೀ ಕೆ. ವೆಂಕಟೇಶ್:– ಮಾನ್ಯ ಉಪಾಧ್ಯಕ್ಷರೆ, ಮಾಹಿತಿ ಸರಿಯಿದೆಯೆಂದು ಹೇಳುತ್ತಾರೆ. ಆದರೆ ವಾಸ್ತವಾಂಶ ಅದಲ್ಲ. ನಾನು ದಿನಾ ಆ ಕ್ಷೇತ್ರದಲ್ಲಿ ಓಡಾಡುತ್ತೇನೆ. ಬೇಕೆದ್ದರೆ ನೀವು ನನ್ನ ಜೊತೆ ಬನ್ನಿ.

ಶ್ರೀ ಸಿ.ಎಂ. ಉದಾಸಿ:– ನೀವು ಬರಬೇಕು ಎಂದು ಹೇಳಿದರೆ ನಾನು ಬರುತ್ತೇನೆ. ಆ ಮಾತು ಬೇರೆ.

ಶ್ರೀ ಕೆ. ವೆಂಕಟೇಶ್:– ನೀವು ಅಲ್ಲಿ ಬಂದು ನೋಡಿದರೆ ಅಲ್ಲಿರುವಂತಹ ರಸ್ತೆಗಳ ಪರಿಸ್ಥಿತಿ ಹೇಗಿದೆ ಎಂದು ಗೊತ್ತಾಗುತ್ತದೆ. ಸುಳ್ಳು ಮಾಹಿತಿಯನ್ನು ನೀವು ಕೊಟ್ಟಿಲ್ಲ. ನಿಮ್ಮ ಅಧಿಕಾರಿಗಳು ನಿಮಗೆ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ಇದು ಮುಖ ಸೇವ್ ಮಾಡಿಕೊಳ್ಳುವ ಪ್ರಶ್ನೆಯಲ್ಲ. ಇದು ಜನಗಳ ಪ್ರಶ್ನೆ. ಮಾನ್ಯ ಮಂತ್ರಿಗಳಿಗೆ ತಪ್ಪು ಮಾಹಿತಿಯನ್ನು ಕೊಟ್ಟು, ಎಲ್ಲಾ ಸರಿಯಿದೆಯೆಂದರೆ ನಾನು ಇದನ್ನು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೇ?

ಶ್ರೀ ಸಿ.ಎಂ. ಉದಾಸಿ:– ಇಲ್ಲಿರುವಂತಹ ಮಾಹಿತಿ ಪ್ರಕಾರ ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ವೆಂಕಟೇಶ್:– ನಿಮ್ಮ ಮಾಹಿತಿ ತಪ್ಪು ಎಂದು ನಾನು ಹೇಳುತ್ತಿದ್ದೇನೆ. ನೀವು ಅಲ್ಲಿಗೆ ಬನ್ನಿ. ಅಲ್ಲಿ ವಾಹನಗಳು ಅಲ್ಲ, ಜನಗಳೇ ಆ ರಸ್ತೆಗಳಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಆ ಪರಿಸ್ಥಿತಿ ಇದೆ.

ಶ್ರೀ ಸಿ.ಎಂ. ಉದಾಸಿ:– ನಾನು ಉತ್ತರ ಹೇಳಿದ ಮೇಲೆ ನೀವು ನಿಮ್ಮ ವಿಚಾರವನ್ನು ಹೇಳಿ.

ಶ್ರೀ ಕೆ. ವೆಂಕಟೇಶ್:– ನೀವು ಬರೀ ಅಸಮಾಧಾನದ ಉತ್ತರವನ್ನು ಹೇಳಿದರೆ ಆಗುವುದಿಲ್ಲ.

ಶ್ರೀ ಸಿ.ಎಂ. ಉದಾಸಿ:– ಈಗ 12.70 ಕೋಟಿ ರೂಪಾಯಿ ರಸ್ತೆ ಕೆಲಸ ಏನಾಗಿದೆ, ಈ specifice case ನಲ್ಲಿ ಕೆಲಸ ಮಾಡದೇ ಬಿಲ್ ತೆಗೆದುಕೊಂಡಿದ್ದಾರೆ ಅಥವಾ ಕಳಪೆ ಕೆಲಸವಾಗಿದೆ ಎನ್ನುವುದೇನಾದರೂ ಇದ್ದರೆ ವಿಚಾರಣೆ ಮಾಡುವುದು ಒಂದು ವಿಚಾರ. 344 ಕಿ.ಮೀ.ಗಳಲ್ಲಿ 76 ಕಿ.ಮೀ. ರಸ್ತೆ ಆಗಿ ನೂರಕ್ಕೆ ನೂರು ಕೆಟ್ಟಿದೆ ಎನ್ನುವುದಲ್ಲ. ಇದರಲ್ಲಿ ಶೇಕಡ 30.35 ರಷ್ಟು ರಸ್ತೆ ಗುಂಡಿ ಮುಚ್ಚಬೇಕಾಗಿರುವಂತಹ

ಕೆಲಸ ಆಗಬೇಕಾಗಿದೆ ಎನ್ನುವುದು ನನ್ನ ಗಮನದಲ್ಲಿದೆ. ಈಗ 9.10 ಕೋಟಿ ರೂಪಾಯಿ ಕೆಲಸ ಆಗುವಂತಹ ವಿಚಾರದಲ್ಲಿ ಪ್ರಸ್ತಾವನೆಯನ್ನು ತಂದಿದೆಯೆನ್ನುವುದು ನನ್ನ ಗಮನದಲ್ಲಿದೆ. ಈ ಎಲ್ಲಾ ವಿಚಾರ ಗೊತ್ತಿದ್ದೂ ನೀವು ಈ ರೀತಿ ನನ್ನ ಮೇಲೆ ಆರೋಪ ಮಾಡುವುದು ಎಷ್ಟರಮಟ್ಟಿಗೆ ಸರಿ?

ಶ್ರೀ ಕೆ. ವೆಂಕಟೇಶ್:– ನಾನು ವೈಯಕ್ತಿಕವಾಗಿ ನಿಮ್ಮ ಮೇಲೆ ಆರೋಪ ಮಾಡುತ್ತಿಲ್ಲ. ಆದರೆ ನೀವು ಗಮನ ಕೊಡುತ್ತಿಲ್ಲವೆನ್ನುವುದು ನನ್ನ ಆರೋಪ ಅಷ್ಟೆ. ನಿಮ್ಮ ಹತ್ತಿರ ಅನೇಕ ಸಲ ಬಂದು ಮನವಿ ಮಾಡಿದ್ದೇನೆ. ನಿಮ್ಮ ಗಮನಕ್ಕೂ ತಂದು ಒತ್ತಾಯ ಹಾಕಿದ್ದೇನೆ. ಆದರೂ ನೀವು ಅದರ ಕಡೆ ಗಮನ ಕೊಡುತ್ತಿಲ್ಲ. ಮುಖ್ಯ ರಸ್ತೆಗಳಲ್ಲಿ ವಾಹನ ಸಂಚಾರ ಮಾಡಬೇಕಲ್ಲವೇ? ನಾನು ಅವರನ್ನು ಕರೆದಕೊಂಡು ಹೋಗುತ್ತೇನೆ, ಅವರು ಬಂದು ನೋಡಲಿ, ಆಗ ಅವರಿಗೆ ಗೊತ್ತಾಗುತ್ತದೆ.

ಶ್ರೀ ಸಿ.ಎಂ. ಉದಾಸಿ:– ಈಗ ಒಂದು ನೋಡಿ ಎಂದು ಏನು ಹೇಳುತ್ತಿದ್ದೀರಿ, ನಾನು ಅಲ್ಲಿಗೆ ಬರುತ್ತೇನೆ, ಆ ಮಾತು ಬೇರೆ. ಆದರೆ ಅಲ್ಲಿ ಪೂರ್ತಿ ಏನೂ ಆಗಿಲ್ಲ ಎಂದು ಹೇಳುವುದು ಸರಿಯಲ್ಲ.

ಶ್ರೀ ಕೆ. ವೆಂಕಟೇಶ್:– ನೀವು ಅಲ್ಲಿಗೆ ಬರುತ್ತೇನೆಂದು ಹೇಳಿಬಿಡಿ, ಸಾಕು ನಮಗೆ ಉತ್ತರ ಬೇಡ, ನೀವು ಅಲ್ಲಿ ಬಂದು ನೋಡಿ ಆಮೇಲೆ ಮಾತನಾಡಿ.

ಶ್ರೀ ಸಿ.ಎಂ. ಉದಾಸಿ:– ಆಯಿತು. ಅಲ್ಲಿ ಬಂದು ನೋಡಿದ ಮೇಲೆ ಹೇಳುತ್ತೇನೆ.

ಶ್ರೀ ಕೆ. ವೆಂಕಟೇಶ್:– NH 74 ಕಿ.ಮೀ ಇದೆ. ಅದನ್ನು KRDCL ಗೆ ಸೇರಿಸಿ ಎಂದು ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಒತ್ತಾಯ ಮಾಡಿ ಹೇಳಿದ್ದೇವೆ. ಅದನ್ನು ಸೇರಿಸುತ್ತೇವೆಂದು ಒಪ್ಪಿಕೊಂಡಿದ್ದೀರಿ.

ಶ್ರೀ ಸಿ.ಎಂ. ಉದಾಸಿ:– ಎಂಡಿಆರ್ ಮತ್ತು ರಾಜ್ಯ ಹೆದ್ದಾರಿ ಅಭಿವೃದ್ಧಿಯಲ್ಲಿ ಎಷ್ಟು ಕಿ.ಮೀ. ಬರುತ್ತದೆಯೆನ್ನುವುದನ್ನು ನೋಡಿಕೊಂಡು ನಾನು ಮಾಡಿಸುವಂತಹ ಕೆಲಸವನ್ನು ಮಾಡುತ್ತಿದ್ದೇನೆ. ಈಗ ಅಲ್ಲಿ 9 ಕೋಟಿ ರೂಪಾಯಿ ಕೆಲಸ ಏನಾಗಬೇಕಾಗಿದೆ, ಅದನ್ನು ನೋಡಿಕೊಂಡು, ನಂತರ ಅಲ್ಲಿಗೆ ಬಂದ ಮೇಲೆ ಇನ್ನು ಉಳಿದ ರಸ್ತೆಗಳ ಕೆಲಸ ಏನಾಗಬೇಕಾಗಿದೆ ಎನ್ನುವುದನ್ನು ನಾನು ನೋಡಿ ಹೇಳುತ್ತೇನೆ. ಆದರೆ ಈಗ ಕೆಲಸ ಆಗಿಲ್ಲವೆಂದು ಏನೂ ಹೇಳುತ್ತಿದ್ದೀರಿ, ಅದಕ್ಕೆ ನಾನು ಒಂದು ಸಲ ಬಂದು ನೋಡುತ್ತೇನೆ.

ಶ್ರೀ ಕೆ. ವೆಂಕಟೇಶ್:– 9 ಕೋಟಿ ರೂಪಾಯಿಯಲ್ಲಿ 400 ಕಿ.ಮೀ. ರಸ್ತೆಯನ್ನು ರಿಪೇರಿ ಮಾಡುವುದು ಹೇಗೆ?

ಶ್ರೀ ಸಿ.ಎಂ. ಉದಾಸಿ:– ರಸ್ತೆ ಗುಂಡಿ ಮುಚ್ಚುವ ಕೆಲಸ ಇದೆ.

ಶ್ರೀ ಕೆ. ವೆಂಕಟೇಶ್:– ಈಗ ನೀವು ನನಗೆ ಉತ್ತರ ಕೊಡುವುದು ಬೇಡ. ನಮ್ಮಲ್ಲಿ ಮುಖ್ಯ ರಸ್ತೆಗಳು ಇವೆಯಲ್ಲ. ಅವುಗಳನ್ನು ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳನ್ನಾಗಿ ಮಾಡಿಕೊಡಿ, ನಮಗೆ ಅಷ್ಟೇ ಸಾಕು. ನೀವು ಬೋಡ ಹಾಕಿಸಿಕೊಳ್ಳಿ, ಅದಕ್ಕೆ ನಮ್ಮದೇನೂ ತಕರಾರಿಲ್ಲ. ನಮಗೆ ರಸ್ತೆಯಾಗಬೇಕು ಅಷ್ಟೇ.

ಶ್ರೀ ಸಿ.ಎಂ. ಉದಾಸಿ:– ನಾನು ಹೇಳಿದೆನಲ್ಲ, motorable ಆಗಿ ಮಾಡಬೇಕಾದಂತಹ ಕೆಲಸವನ್ನು ಸಂಪೂರ್ಣವಾಗಿ ಮಾಡುತ್ತೇವೆ.

ಶ್ರೀ ಕೆ. ವೆಂಕಟೇಶ್:– ನೀವು ಯಾವಾಗ ಬರುತ್ತೇನೆಂದು ಹೇಳಲಿಲ್ಲ.

ಶ್ರೀ ಸಿ.ಎಂ. ಉದಾಸಿ:– ನಾನು 25 ರ ನಂತರ ಬರುತ್ತೇನೆಂದು ಆಗಲೇ ಹೇಳಿದ್ದೇವೆ.

ಉಪಾಧ್ಯಕ್ಷರು:– ಮಾನ್ಯ ಮಂತ್ರಿಗಳು 25ರ ನಂತರ ಭೇಟಿ ಮಾಡುತ್ತಾರೆ. ಆರ್. ನರೇಂದ್ರ ಪ್ರಶ್ನೆ ಕೇಳಿ.

ಶ್ರೀ ವೈ.ಎನ್. ರುದ್ರೇಶ್ ಗೌಡ:– ಮಾನ್ಯ ಉಪಾಧ್ಯಕ್ಷರೆ, ನೀವು ಕನಿಷ್ಠ 3–4 ಕೋಟಿ ರೂಪಾಯಿ ಕೊಡಬೇಕು. ಒಂದೂವರೆ ಕೋಟಿ ರೂಪಾಯಿ ಕೊಟ್ಟರೆ ನಾವು ಮೂರುವರೆ ವರ್ಷದಲ್ಲಿ ಏನು ಮಾಡುವುದಕ್ಕೆ ಸಾಧ್ಯ? 200–250 ಕಿ.ಮೀ.ಗೆ ಒಂದೂವರೆ ಕೋಟಿ ರೂಪಾಯಿ 5054 ಹೆಡ್‌ನಲ್ಲಿ ಕೊಟ್ಟರೆ ಸದಸ್ಯರು ಅದರಲ್ಲಿ ಏನು ಮಾಡುವುದು? ಅದಕ್ಕೋಸ್ಕರ ತಾವು ಏನು 5054 ಕೊಡುತ್ತೀರಿ, ಅದನ್ನು ಸ್ವಲ್ಪ ಜಾಸ್ತಿ ಮಾಡಿ. ನೀವು ಮೂರು ಅಥವಾ ಮೂರುವರೆ ಕೋಟಿ ರೂಪಾಯಿ ಕೊಡುವಂತೆ ಮಾಡಿದರೆ ಸದಸ್ಯರಿಗೆ ಅಲ್ಲಿ ರಸ್ತೆಗಳನ್ನು ಮಾಡಿಸುವುದಕ್ಕೆ ಸುಲಭವಾಗುತ್ತದೆ. ಒಂದೂವರೆ ಕೋಟಿ ರೂಪಾಯಿ ಯಾವ ಕಾರಣಕ್ಕೂ ಕೂಡ ಸಾಕಾಗುವುದಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೇ, ನಮ್ಮ ಹಿರಿಯಾಪಟ್ಟಣದ ವೆಂಕಟೇಶ್‌ರವರು ಸೇರಿದಂತೆ ಮಾನ್ಯ ಸದಸ್ಯರಾದ ಕುಮಾರಸ್ವಾಮಿಯವರು ಕೇಳಿದರು. ನಮ್ಮ ಮಲೆನಾಡಿನಲ್ಲಿ ರಸ್ತೆಗಳು ಯಾವ ಮಟ್ಟದಲ್ಲಿವೆ ಎಂದು ತಮಗು ಚೆನ್ನಾಗಿ ಗೊತ್ತು. ಈಗಿರುವಂತಹ ಗುಂಡಿಗಳ ಆಳ ಮತ್ತು ಅಗಲ ಹೋಲಿಸಿದರೆ

ಒಂದು ಕಿ.ಮೀ. ಗುಂಡಿ ಮುಚ್ಚುವುದಕ್ಕೆ 8 ರಿಂದ 10 ಲಕ್ಷ ರೂಪಾಯಿ ಬೇಕು. ಸರ್ಕಾರಕ್ಕೆ ನನ್ನ ಒಂದೇ ಒಂದು ಸಲಹೆ ಏನೆಂದರೆ ಗುಂಡಿ ಮುಚ್ಚುವುದಕ್ಕೆ ಆಗುವುದಿಲ್ಲ. ದಯವಿಟ್ಟು ಆ ರಸ್ತೆಗಳನ್ನು ಸಂಪೂರ್ಣವಾಗಿ ಜೆಸಿಬಿಯಲ್ಲಿ ಕೆರೆಸಿ roller ಮಾಡಿಸಿಬಿಡಿ ಸಾಕು.

ಶ್ರೀ ಸೈಯ್ಯದ್ ಯಾಸೀನ್:– ಮಾನ್ಯ ಉಪಾಧ್ಯಕ್ಷರೆ, ರಾಯಚೂರಿನಲ್ಲಿ ನಾವು ಮಂತ್ರಾಲಯಂ ದೊಡ್ಡ ರಸ್ತೆಯನ್ನು ಕೊಟ್ಟಿದ್ದೇವೆ, ಅವರು half way ಕೊಟ್ಟಿದ್ದಾರೆ. ಅಲ್ಲಿ flood ಆದಮೇಲೆ 49 ಕೋಟಿ ರೂಪಾಯಿಯ broadened bridge ಇದೆ. Only Raichur is not getting benefit. ಇಡೀ ಕರ್ನಾಟಕಕ್ಕೆ ಬೆನಿಫಿಟ್ ಆಗುತ್ತಿದೆ. Half road ಮಾಡಿದ್ದಾರೆ. Rs. 49 crore, we have spent for construction of bridge. Bridge construction ಆದಮೇಲೆ ಅಲ್ಲಿ ರೋಡ್ ಮಾಡಲೇಬೇಕು. ಅಲ್ಲಿ only 14 K.M. ಆಗಿದೆ, ಇನ್ನು 14 ಕಿ.ಮೀ. ರಸ್ತೆ ಆಗಬೇಕಿದ್ದು ಎಲ್ಲಾ ಕಡೆ ಅರ್ಧ ಕೆಲಸವಾಗಿದೆ. ಆ ರಸ್ತೆಯನ್ನು ಪೂರ್ಣ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಉಪಾಧ್ಯಕ್ಷರು:– ವೆಂಕಟೇಶ್‌ರವರೆ, ತಮಗೆ ಅವಕಾಶ ಕೊಟ್ಟಿದ್ದೇನೆ, ಬೇರೆ ಪ್ರಶ್ನೆಯಲ್ಲಿ ಕೇಳಿ. ಮಾನ್ಯ ಸಿದ್ಧರಾಮಯ್ಯನವರೆ, ಮಾತನಾಡಿ.

ಶ್ರೀ ಕೆ. ವೆಂಕಟೇಶ್:– ಮಾನ್ಯ ಉಪಾಧ್ಯಕ್ಷರೆ, ಹಾಸನ ಜಿಲ್ಲೆಯವರು strike ಮಾಡಿದರು. ಅವರಿಗೆ ನೂರಾರು ಕಿ.ಮೀ. ರಸ್ತೆ ಮಾಡಿದರು. ನಾವು ಆ ರೀತಿ strike ಮಾಡಿದರೆ ಮಾಡಿ ಕೊಡುತ್ತಾರೆ ಕೇಳಿ. ನಾವು ಹೋಗಿ ಅವರ ಮುಂದೆ ಕುಳಿತು strike ಮಾಡುತ್ತೇವೆ.

ಉಪಾಧ್ಯಕ್ಷರು:– ಮಾನ್ಯ ವೆಂಕಟೇಶ್‌ರವರೆ, ತಮಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಮಾನ್ಯ ಸಿದ್ಧರಾಮಯ್ಯನವರೆ, ತಾವು ಮಾತನಾಡಿ.

ಶ್ರೀ ಸಿದ್ಧರಾಮಯ್ಯ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವೆಂಕಟೇಶ್‌ರವರು ಹೇಳುವುದು ಸರಿಯಾಗಿದೆ. ಮಾನ್ಯ ಹೆಚ್.ಡಿ. ದೇವೇಗೌಡರು Chief Minister ಮನೆ ಮುಂದೆ ಹೋಗಿ ಧರಣಿ ಮಾಡುತ್ತೇನೆಂದು ಹೇಳಿದ ತಕ್ಷಣವೇ ಹಾಸನ ಜಿಲ್ಲೆಗೆ ಹೆಚ್ಚು ಅನುದಾನವನ್ನು ಕೊಡುತ್ತೇವೆಂದು ಒಪ್ಪಿಕೊಂಡು ಕೆಲಸ ಮಾಡುವುದಕ್ಕೆ ಪ್ರಾರಂಭಿಸಿದರು. ತಾವು ಮಾಡಿ ನಮ್ಮದು ಏನೂ ತಕರಾರು ಇಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಸರ್ಕಾರ ಒಪ್ಪಿಕೊಂಡಿದ್ದು ಬಿಟ್ಟರೆ ಅದರಿಂದ ಪರಿಣಾಮ ಏನೂ ಆಗಿಲ್ಲ, ಹಣ ಬಿಡುಗಡೆ ಆಗಿಲ್ಲ. ಸರ್ಕಾರ ಒಪ್ಪಿಕೊಂಡಿದ್ದು, ನಿಜ.

ಶ್ರೀ ಸಿದ್ಧರಾಮಯ್ಯ:– ಒಪ್ಪಿಕೊಂಡಿದ್ದಾರೆ. ಅವರಿಗೆ Appendix-E ಯಲ್ಲೂ ಕೂಡ ಹೆಚ್ಚಿಗೆ ಹಣವನ್ನು ಕೊಡುತ್ತಿದ್ದಾರೆಂದು ನನಗೆ information ಇದೆ. ನಮ್ಮ ಕಾಂಗ್ರೆಸ್ ಶಾಸಕರುಗಳಿಗೆ ಏಕೆ ಈ ರೀತಿ ಅನ್ಯಾಯ ಮಾಡುತ್ತಿದ್ದೀರಿ? ಇದರಲ್ಲಿ ತಾರತಮ್ಯ ಏಕೆ ಮಾಡುತ್ತೀರಿ? ತಾವು ಒಂದು ಕೆಲಸ ಮಾಡಿ, ನೀವು ನಿಮ್ಮ ಕ್ಷೇತ್ರಗಳಿಗೆ ಎಷ್ಟು ಮಾಡಿಕೊಂಡಿದ್ದೀರಿ, ಅದರಲ್ಲಿ ಅರ್ಧ ಭಾಗ ನಮ್ಮ ಎಂ.ಎಲ್.ಎ.ಗಳಿಗೆ ಕೊಟ್ಟು ಬಿಡಿ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಎಷ್ಟು ಮಾಡಿಕೊಂಡಿದ್ದಾರೋ ಅದರಲ್ಲಿ ಕಾಲು ಭಾಗ ನಮ್ಮ ಎಂ.ಎಲ್.ಎ.ಗಳಿಗೆ ಕೊಡಿ. ಇದನ್ನು ನೀವು ಒಪ್ಪಿಕೊಳ್ಳುತ್ತೀರಾ? ನಿಮ್ಮ ಕ್ಷೇತ್ರದಲ್ಲಿ ಆಗಿರುವಂಥದ್ದರಲ್ಲಿ ಅರ್ಧ ಭಾಗ ಕೊಡುತ್ತೀರಾ? ಮಾನ್ಯ ವೆಂಕಟೇಶ್‌ರವರ ಕ್ಷೇತ್ರ ಬಹಳ ದೊಡ್ಡದಾಗಿದೆ. ಇಲ್ಲಿ ವಿಲೇಜ್ ರಸ್ತೆಗಳು ಹೆಚ್ಚಿಗೆ ಇದೆ, ಇವರು ನನ್ನನ್ನು ಕರೆದುಕೊಂಡು ಹೋಗಿದ್ದಾರೆ, ನಾನು ಇಲ್ಲಿಗೆ ಅನೇಕ ಬಾರಿ ಹೋಗಿದ್ದೇನೆ. ಇಲ್ಲಿ ರಸ್ತೆಗಳು ಎಷ್ಟು ಕುಲಗೆಟ್ಟಿದೆಯೆಂದರೆ, ಆ ರಸ್ತೆಗಳಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಇಂಥ priority ಇರುವಂಥ ರಸ್ತೆಗಳನ್ನು ಬಿಟ್ಟು ಎಲ್ಲವನ್ನು ತೆಗೆದುಕೊಂಡು ಹೋಗಿ ನಿಮ್ಮ ಪಕ್ಷದವರಿಗೆ, ನಿಮ್ಮ ಕ್ಷೇತ್ರಗಳಿಗೆ ಹಾಕಿಕೊಂಡರೆ, ನಾವು ಸದನದಲ್ಲಿ ಏಕೆ ಹಣವನ್ನು ಪಾಸ್ ಮಾಡಿ ಕೊಡಬೇಕು? ಈ ರೀತಿ ತಾರತಮ್ಯ ಕಳೆದ ಮೂರು ವರ್ಷಗಳಿಂದ ಬಹಳ ನಡೆಯುತ್ತಿದೆ. ದಯಮಾಡಿ ಈ ರೀತಿ ಆಗಬಾರದು. ಈ ಸಾರಿ ಇನ್ನೂ ಅಪೆಂಡಿಕ್ಸ್–ಇ ಪುಸ್ತಕ ಬಂದಿಲ್ಲ, ಇವರು ಕೊನೆಯಲ್ಲಿ ಈ ಪುಸ್ತಕವನ್ನು ಮಾಡುತ್ತಾರೆ. ಈಗ ಡಿಸೆಂಬರ್ ತಿಂಗಳು ಮುಗಿಯಿತು, ಕೊನೆಯಲ್ಲಿ ಈ ಪುಸ್ತಕ ಬರುತ್ತದೆ. ಇವರು ಟೆಂಡರ್ ಕರೆದು ಮಾಡುವುದರೊಳಗೆ ವರ್ಷ ಮುಗಿದು ಹೋಗುತ್ತದೆ, ಈ ವರ್ಷ ಏನೂ ಕೆಲಸವಿಲ್ಲ. ಇದು ನಮಗೆ ಗೊತ್ತೇ ಆಗುವುದಿಲ್ಲ, ಕೊನೆಯಲ್ಲಿ ಅಸೆಂಬ್ಲಿ ಇಲ್ಲದೇ ಇರುವಾಗ ಪುಸ್ತಕ ಹೊರಗೆ ಬರುತ್ತದೆ. ಅದಕ್ಕೆ ಈ ಸಾರಿ ಮಾಡುವಾಗ ನಮ್ಮ ಎಂ.ಎಲ್.ಎ.ಗಳಿಗೆ, ಮತ್ತೆ ಯಾವ್ಯಾವ ಕ್ಷೇತ್ರಗಳಲ್ಲಿ ರಸ್ತೆಗಳು ಹೆಚ್ಚಿಗೆ ಇದೆ, ಅಲ್ಲಿಗೆ ಹೆಚ್ಚಿಗೆ ಹಣವನ್ನು ಕೊಡುವಂಥ ಕೆಲಸವನ್ನು ದಯಮಾಡಿ ಮಾಡಬೇಕು. ತಾವು ಯಾವಾಗಲಾದರೂ ಒಂದು ಸಾರಿ ಮಾನ್ಯ ವೆಂಕಟೇಶ್‌ರವರ ಕ್ಷೇತ್ರಕ್ಕೆ ಹೋಗಿದ್ದೀರಾ? ನೀವು ಇಷ್ಟೊಂದು ಸ್ನೇಹವಿದ್ದರೂ ಏಕೆ ಅಲ್ಲಿಗೆ ಹೋಗಿಲ್ಲ?

ಶ್ರೀ ಸಿ.ಎಂ. ಉದಾಸಿ:– ಹೋಗಿದ್ದೇನೆ.

ಶ್ರೀ ಸಿದ್ಧರಾಮಯ್ಯ:– ಹೋಗೇ ಇಲ್ಲ.

ಶ್ರೀ ಸಿ.ಎಂ. ಉದಾಸಿ:– ಮಾನ್ಯ ಸದಸ್ಯರನ್ನು ಕೇಳಿ ಅವರೇ ಹೇಳಲಿ.

ಶ್ರೀ ಸಿದ್ಧರಾಮಯ್ಯ:– ಯಾವಾಗ ಹೋಗಿದ್ದೀರಿ?

ಶ್ರೀ ಕೆ. ವೆಂಕಟೇಶ್:– ಬಂದಿದ್ದರು.

ಶ್ರೀ ಸಿ.ಎಂ. ಉದಾಸಿ:– ಅವರ ಕ್ಷೇತ್ರಕ್ಕೆ ಹೋಗಿದ್ದೇನೆ.

ಶ್ರೀ ಸಿದ್ಧರಾಮಯ್ಯ:– ನನ್ನ ಕ್ಷೇತ್ರಕ್ಕೆ ಬಂದಿಲ್ಲ.

ಶ್ರೀ ಸಿ.ಎಂ. ಉದಾಸಿ:– ನಿಮ್ಮ ಕ್ಷೇತ್ರಕ್ಕೆ ಬರುವ ಅವಶ್ಯಕತೆಯೇ ಇಲ್ಲ ಬಿಡಿ.

ಶ್ರೀ ಸಿದ್ಧರಾಮಯ್ಯ:– ನಮ್ಮ ಜೊತೆಗೆ ಸ್ನೇಹ ಇದೆ, ನೀವು ಬಂದಿಲ್ಲ.

ಶ್ರೀ ಸಿ.ಎಂ. ಉದಾಸಿ:– ಮಾನ್ಯ ಉಪಾಧ್ಯಕ್ಷರೆ, ರಾಜ್ಯಾದ್ಯಂತ ರಸ್ತೆಗಳನ್ನು ಅಭಿವೃದ್ಧಿಪಡಿಸುವಂಥ ಕೆಲಸದಲ್ಲಿ partiality ಆಗುತ್ತದೆಂಬ ಭಾವನೆಯನ್ನು ಯಾರೂ ವ್ಯಕ್ತಪಡಿಸಬೇಕಾದ ಅವಶ್ಯಕತೆ ಇಲ್ಲ. ಹಿಂದುಳಿದ ಪ್ರದೇಶಗಳು ಎಲ್ಲೆಲ್ಲಿ ಇವೆಯೋ, ಅವುಗಳನ್ನು ಗಮನದಲ್ಲಿಟ್ಟುಕೊಂಡು ಮಾಡು ಸಂದರ್ಭದಲ್ಲಿ, ಕೆಲವು ಕಡೆ ಹೆಚ್ಚು ಹಣ ಖರ್ಚು ಆಗಿರಬಹುದೇ ಹೊರತು, ನಾವು ಯಾವುದನ್ನು ಆ ರೀತಿ ಮಾಡುವುದಕ್ಕೆ ಹೋಗಿಲ್ಲ. ರಾಜ್ಯದ ಎಲ್ಲಾ ಕಡೆಗಳಲ್ಲೂ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು ಈಗ ಪ್ರಾರಂಭವಾಗುತ್ತಿದೆ. 15,000 ಕಿ.ಮೀ. ರಸ್ತೆಗಳಲ್ಲಿ ಮೊದಲನೇ ಹಂತದಲ್ಲಿ 7,000 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕಾಗಿರುವಂಥ ಕಾಮಗಾರಿಗೆ ಅನುಮೋದನೆ ದೊರೆಯಲಿದೆ. ಆ ಕೆಲಸ ಪ್ರಾರಂಭವಾಗುತ್ತಿರುವುದರಿಂದ ಮತ್ತೆ Appendix-E ಯಲ್ಲಿ ಆಗಬೇಕಾಗಿರುವಂಥ ಕೆಲಸಗಳು ಸಹಿತ ಪ್ರಾರಂಭವಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ಪ್ರಶ್ನೆ ಉದ್ಭವವಾಗಿರುವಂಥದ್ದು ಮಾನ್ಯ ವೆಂಕಟೇಶ್‌ರವರ ಕ್ಷೇತ್ರ ಪಿರಿಯಾಪಟ್ಟಣದಲ್ಲಿ ತಂಬಾಕು ಬೆಳೆಗಾರರು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಬೇಕಾಗುವಂಥ ತಂಬಾಕು ಬೆಳೆಯನ್ನು ಬೆಳೆಯುವ ಅತ್ಯುತ್ತಮ ಸ್ಥಳವಾಗಿರುವುದರಿಂದ ಅಲ್ಲಿ ಸುತ್ತಮುತ್ತಲ ಪ್ರದೇಶಗಳಿಂದ ಬರುವಂಥ ವಾಹನಗಳ ದಟ್ಟಣೆ ಹೆಚ್ಚಾಗಿರುವುದರಿಂದಲೂ ಸಹ ರಸ್ತೆಗಳು ಹಾಳಾಗುವುದಕ್ಕೆ ಕಾರಣವಾಗುತ್ತದೆ, ಮತ್ತೆ ಇಲ್ಲಿ ಭೂಮಿಯಲ್ಲಿ ಕಪ್ಪು ಮಣ್ಣು ಇರುವುದರಿಂದಲೂ ರಸ್ತೆಗಳು ಹೆಚ್ಚು ಹಾಳಾಗುವುದನ್ನು ನಾವು ಗಮನಿಸಿದ್ದೇವೆ. ಆ ಕಾರಣದಿಂದ ಅದಕ್ಕೆ ಬೇಕಾಗಿರುವಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ನಾವು ಇವತ್ತು ಹೇಳಬೇಕೆಂದರೆ ಪ್ರತಿಯೊಂದು ಕಿ.ಮೀ.ರಸ್ತೆಗೆ 30,000 ರೂ.ಗಳು ಮಾತ್ರ ರಸ್ತೆ ಅಭಿವೃದ್ಧಿಗೆ, ಗುಂಡಿ ಮುಚ್ಚುವುದಕ್ಕೆ ಹಣವನ್ನು ಕೊಡುತ್ತಿದ್ದೆವು. ಅವರು ಹೇಳುವಂಥದ್ದು ಏನೆಂದರೆ, ಗುಂಡಿಗಳನ್ನು

ಮುಚ್ಚುವುದಕ್ಕೆ ಕೊಡುವ ಹಣ ಬೇರೆ, ಒಂದು ಕಿ.ಮೀ. ರಸ್ತೆಗೆ 10 ಲಕ್ಷ ರೂ.ಗಳಿಂದ Asphalt work ಗೆ, recarpet ಮಾಡುವುದು ಬೇರೆ, ಈ ಕೆಲಸಕ್ಕೂ ಸಹಿತ ಇವತ್ತು ಇಪ್ಪತ್ತು ಲಕ್ಷ ರೂ. ಗಳವರೆಗೂ ಖರ್ಚು ಮಾಡಿ, ಎಲ್ಲಾ ಹೆದ್ದಾರಿಗಳಲ್ಲಿ ಕೆಲವು ಆಯ್ದ ಭಾಗಗಳಲ್ಲಿ ಎರಡು ಹಂತಗಳಲ್ಲಿ ಇದನ್ನು ಮಾಡುವ ಯೋಚನೆ ಮಾಡಿ, ಯೋಜನೆಯನ್ನು ರೂಪಿಸಿದ್ದೇವೆಂಬ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇನ್ನು ಬರುವ ದಿವಸಗಳಲ್ಲಿ ಗುಣಮಟ್ಟದ ರಸ್ತೆಗಳು ಆಗುತ್ತವೆ, ಇದರಲ್ಲಿ partiality ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ length ಅನ್ನು ನೋಡಬೇಕಾಗುತ್ತದೆ. ಹಿಂದೆ ಕೆಲವು ಕಡೆಗಳಲ್ಲಿ ಅಭಿವೃದ್ಧಿಯಾಗಿರುವಂಥದ್ದು, ಹೆಚ್ಚು ಅಭಿವೃದ್ಧಿಯಾಗಿರುವಂಥದ್ದನ್ನು ಬಿಟ್ಟು ಉಳಿದ ಕಡೆಗಳಲ್ಲಿ ಮಾಡಬೇಕಾದಂಥ ಸಂದರ್ಭದಲ್ಲಿ ಅನುದಾನ ಕೊಡುವಾಗ ಹೆಚ್ಚು-ಕಡಿಮೆ ಆಗಿರುವಂಥದ್ದು ಆಗಿರುತ್ತದೆ. ನಾನು ಆ ರೀತಿ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಆಗಿರುವಂಥದ್ದನ್ನೆಲ್ಲಾ ಹೇಳಿ ಅದಕ್ಕೆ ವಾದ ಮಂಡನೆ ಮಾಡಿ, justification ಮಾಡಿಕೊಳ್ಳುವ ಉದ್ದೇಶವಿಲ್ಲ. ಇದು ರಾಜ್ಯದಾದ್ಯಂತ ಅಭಿವೃದ್ಧಿ ದೃಷ್ಟಿಯಿಂದ ಮೊದಲ ಬಾರಿಗೆ ಇಷ್ಟು ದೊಡ್ಡ ಮೊತ್ತದಲ್ಲಿ ಹಣವನ್ನು ಖರ್ಚು ಮಾಡುವ ವ್ಯವಸ್ಥೆಯಾಗುತ್ತಿದೆ. ತಮಗೆಲ್ಲಾ ಗೊತ್ತಿರುವ ಹಾಗೆ K-SHIP ನಲ್ಲೂ ಸಹಿತ ಈ ಬಾರಿ ವಿಶೇಷವಾಗಿ ಹೆಚ್ಚು ರಸ್ತೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಮೂರು ಸಾವಿರ ಕೋಟಿ ರೂ.ಗಳಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಿ ಇಡೀ ರಾಜ್ಯದಾದ್ಯಂತ ರಸ್ತೆಗಳನ್ನು ಅಭಿವೃದ್ಧಿ ಮಾಡುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ.

ಪ್ರಶ್ನೆ ಸಂಖ್ಯೆ 58(111)

ಉಪಾಧ್ಯಕ್ಷರು:- ಮಾನ್ಯ ನರೇಂದ್ರರವರೆ, ತಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಯವರು ಕಾಲಾವಕಾಶವನ್ನು ಕೇಳಿದ್ದಾರೆ. ನಿಮ್ಮ ಪ್ರಶ್ನೆಗೆ ಬರುವ ಶುಕ್ರವಾರದಂದು ಮಾನ್ಯ ಲೋಕೋಪಯೋಗಿ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಆರ್. ನರೇಂದ್ರ:- ನಾಲ್ಕು ಬಾರಿ ಇದೇ ರೀತಿ ಆಗಿದೆ.

ಶ್ರೀ ಸಿ.ಎಂ. ಉದಾಸಿ:- ಸೋಮವಾರ ಅಥವಾ ಮಂಗಳವಾರದಂದು ಉತ್ತರವನ್ನು ಕೊಡುತ್ತೇನೆ.

ಶ್ರೀ ಆರ್. ನರೇಂದ್ರ:- ಸೋಮವಾರದಂದು ಉತ್ತರ ಕೊಡಿ.

ಶ್ರೀ ಸಿ.ಎಂ. ಉದಾಸಿ:- ಕೊಡುತ್ತೇನೆ.